ತುಮಕೂರು ಜಿಲ್ಲೆಯ ಬಯಲು ರಂಗಮಂದಿರ ದುರಸ್ತಿ ಬಗ್ಗೆ

15(3): ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಂಡಿನಶಿರಾ ಹೋಬಳಿ ದಂಡಿನ ಶಿರಾದಲ್ಲಿ ದುಸ್ಥಿತಿಯಲ್ಲಿರುವ ಬಯಲು ರಂಗ ಮಂದಿರವನ್ನು ದುರಸ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಎಷ್ಟು ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ದಂಡಿನ ಶಿರಾ ಗ್ರಾಮದಲ್ಲಿನ ಬಯಲು ರಂಗಮಂದಿರ ದುರಸ್ತಿಗೆ ಸಂಬಂಧಿಸಿದ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೆ.ಐ.ಎ.ಡಿ.ಬಿ.ವತಿಯಿಂದ ಮಂಜೂರಾಗಿರುವ ಕೈಗಾರಿಕಾ ಶೆಡ್‌ಗಳ ಬಗ್ಗೆ

17(47): ಶ್ರೀ ಮುನಿರಾಜು ಎಸ್. (ದಾಸರಹಳ್ಳಿ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಪೀಣ್ಯ 2ನೇ ಹಂತದಲ್ಲಿ ಎಷ್ಟು ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಲಾಗಿದೆ?

ಆ) ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡುವಾಗ ಬಡಾವಣೆಯ ಅವಶ್ಯಕತೆಗೆ ಬೇಕಾಗುವ ಬಸ್ ನಿಲ್ದಾಣ, ರಸ್ತೆ ಮುಂತಾದ ಸೌಲಭ್ಯಗಳಿಗೆ ಸ್ಥಳಗಳನ್ನು ಕಾಯ್ದಿರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಸದರಿ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಸ್ಥಳಗಳು ಹಾಗೂ ವಿಸ್ತೀರ್ಣ ಎಷ್ಟು?

ಈ) ಸದರಿ ಜಾಗಗಳನ್ನು ಕಾಯ್ದಿರಿಸಿರುವ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೇ; (ಮಾಹಿತಿ ನೀಡುವುದು);?